# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಹೆಚ್ ರಸ್ತೆ, ತುಮಕೂರು -572103

ದೂರವಾಣಿ; 0816-225596, 0816-2255597, 0816-2255597 ಫ್ಯಾಕ್ಸ್ ; 0816-2270719


ಸಂಖ್ಯೆ:ತುವಿ:ಶೈವಿ:2024-25:/1037 ದಿನಾಂಕ:05.06.2024

## :ಅಧಿಸೂಚನೆ:

ವಿಷಯ:- ಸ್ನಾತಕ ಪದವಿ ಪ್ರೋಗ್ರಾಂಗಳ ಪಠ್ಯಕ್ರಮವನ್ನು ಸಿದ್ದಪಡಿಸಲು Program Structure ಮಾದರಿಯೊಂದಿಗೆ ಸಲ್ಲಿಸುತ್ತಿರುವ ಕುರಿತು.

ಉಲ್ಲೇಖ:- 1) ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ (ವಿಶ್ವವಿದ್ಯಾನಿಲಯಗಳು) ಆದೇಶ ಸಂಖ್ಯೆ:ಇಡಿ:166:ಯುಎನ್‌ಇ:2023 ಬೆಂಗಳೂರು ದಿನಾಂಕ:08.05.2024.

2) ಪದವಿ ಕಾರ್ಯಕ್ರಮಗಳ ಅವಧಿ ಮತ್ತು ಪಠ್ಯಕ್ರಮವನ್ನು ಪರಿಷ್ಕರಿಸುವ ಸಂಬಂಧ ದಿ:16.05.2024 ರಂದು ನಡೆದ ಡೀನರ ಸಭಾ ನಡಾವಳಿಗಳು.

3) ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:27.05.2024.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (01)ರ ಸರ್ಕಾರದ ಆದೇಶಾನುಸಾರ 2024-25 ನೇ ಶೈಕ್ಷಣಿಕ ಸಾಲಿನಿಂದ ಪದವಿ ಕಾರ್ಯಕ್ರಮಗಳ ಅವಧಿ ಮತ್ತು ಪಠ್ಯಕ್ರಮಗಳನ್ನು ಪರಿಷ್ಕರಿಸುವ ಸಂಬಂಧ ವಿಶ್ವವಿದ್ಯಾನಿಲಯದ ವಿವಿಧ ನಿಕಾಯದ ಡೀನರ ಉಲ್ಲೇಖ(02)ರ ಈ ಕೆಳಕಂಡ ಸಭಾ ನಡಾವಳಿಗಳಂತೆ ಕ್ರಮವಹಿಸಬೇಕಾಗಿರುತ್ತದೆ.

1. 2024-25ನೇ ಶೈಕ್ಷಣಿಕ ಸಾಲಿನಲ್ಲಿ ಪದವಿ ಪ್ರೋಗ್ರಾಂನ ಪ್ರಥಮ ವರ್ಷಕ್ಕೆ ಪ್ರವೇಶಾತಿ ಪಡೆಯುವ ವಿದ್ಯಾರ್ಥಿಗಳಿಗೆ 03 ಮೇಜರ್ ವಿಷಯಗಳಂತೆ 03 ವರ್ಷಗಳ (06 ಸೆಮಿಸ್ಟರ್) ಅವಧಿಗೆ ಪದವಿ ಪಡೆಯಲು ಅನುವಾಗುವಂತೆ ಪರಿಷ್ಕೃತ ಪದವಿ ಕಾರ್ಯಕ್ರಮಗಳನ್ನು ಅಳವಡಿಸಿಕೊಳ್ಳಲಾಗಿದೆ.
2. ಸದರಿ ಪರಿಷ್ಕೃತ ಪದವಿ ಕಾರ್ಯಕ್ರಮಗಳನ್ನು ಅಳವಡಿಸಿಕೊಳ್ಳಲು ವಿಷಯವಾರು ಅಧ್ಯಯನ ಮಂಡಳಿಗಳ ಪಠ್ಯಕ್ರಮವನ್ನು ರಚಿಸುವುದು.
3. ವಿವಿಧ ಸ್ನಾತಕ ಪದವಿಯನ್ನು ಅಧ್ಯಯನ ಮಾಡುವ ವಿದ್ಯಾರ್ಥಿಗಳು ಆಯಾ ಕಾಲೇಜುಗಳಲ್ಲಿ ಲಭ್ಯವಿರುವ 03 ಮೇಜರ್ ವಿಷಯಗಳ Combination (Subject Combination) ಆಯ್ಕೆ ಮಾಡಿಕೊಳ್ಳುವುದು ಅಥವಾ ಆಯಾ ಕಾಲೇಜುಗಳಲ್ಲಿ ಲಭ್ಯವಿರುವ 03 ಮೇಜರ್ ವಿಷಯಗಳ Combination (Subject Combination) ಆಯ್ಕೆ ಮಾಡಿಕೊಂಡು 02 ವರ್ಷಗಳ ಅಧ್ಯಯನದ ನಂತರ 3ನೇ ವರ್ಷದ ಪ್ರಾರಂಭದಲ್ಲಿ ಆಯ್ಕೆ ಮಾಡಿಕೊಂಡ 03 ವಿಷಯಗಳ Combination (Subject Combination) ಗಳಲ್ಲಿ ಒಂದು ವಿಷಯವನ್ನು ಮಾತ್ರ ಆಯ್ಕೆ ಮಾಡಿಕೊಂಡು ತೀಕ್ಷ್ಣ ಪ್ರಾವೀಣ್ಯತೆಯೊಂದಿಗೆ (Deep Specialization) ವಿಷಯ ಪ್ರಾವೀಣ್ಯತೆಯ ಪದವಿ ಪಡೆಯುವುದು. ವಿಷಯಾಧಾರಿತ ಸ್ನಾತಕ ಪದವಿ ಅಧ್ಯಯನಗಳಿಗೆ ಅಥವಾ ಒಂದು ಮೇಜರ್ (Single Major) ಹಾಗೆ ಯಾವುದೇ ವಿಷಯಗಳಲ್ಲಿ Combination (Subject Combination) ಮಾಡಿಕೊಳ್ಳುವ ಅವಶ್ಯಕತೆಯಿರುವುದಿಲ್ಲ.
4. Assessment/Evaluation Policy ಸಂಬಂಧ ಪರೀಕ್ಷಾ ಕಾರ್ಯಗಳ ಮಾದರಿಯನ್ನು (Examination Pattern) 80 : 20 ರ ಅನುಪಾತದಲ್ಲಿ (80 ಅಂಕಗಳು Theory ಹಾಗೂ 20 ಆಂತರಿಕ Internal Assessment ಅಂಕಗಳಾಗಿ) ರಚಿಸುವುದು.
5. ಹಿಂದಿನ ವರ್ಷಗಳಲ್ಲಿ ಎನ್‌ಇಪಿ ಅಡಿಯಲ್ಲಿ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳು ಅಂದರೆ 2 ಮತ್ತು 3ನೇ ವರ್ಷದ ವಿದ್ಯಾರ್ಥಿಗಳಿಗೆ ಎನ್‌ಇಪಿ (ರಾಷ್ಟ್ರೀಯ ಶಿಕ್ಷಣ ನೀತಿ) ಪಠ್ಯಕ್ರಮದ ಅನ್ವಯದಂತೆ ಕ್ರಮವಹಿಸುವುದು.

6. ಪಠ್ಯಕ್ರಮವನ್ನು ರಚಿಸುವಲ್ಲಿ ಅಧ್ಯಯನ ಮಂಡಳಿಗಳ ಸ್ವಯಂ ವಿವೇಚನೆ ಮೇರೆಗೆ ಸರ್ಕಾರದ ಆದೇಶದಲ್ಲಿ ತಿಳಿಸಿರುವಂತೆ ರಚಿಸಿ ಸಭಾ ನಡಾವಳಿಗಳನ್ನು ಸಲ್ಲಿಸುವುದು.

ಸದರಿ ಮಾಹಿತಿಯನ್ನು ಉಲ್ಲೇಖ(02)ರ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಈ ಮೂಲಕ ತಿಳಿಸಲಾಗಿದೆ.

ಆದೇಶದ ಮೇರೆಗೆ,

5.6.24

ಕುಲಸಚಿವರು
ಕುಲಸಚಿವರು
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

ಇವರಿಗೆ
1. ಎಲ್ಲಾ ಸ್ನಾತಕ /ಸ್ನಾತಕೋತ್ತರ ಅಧ್ಯಯನ ಮಂಡಳಿಗಳ ಅಧ್ಯಕ್ಷರುಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಎಲ್ಲಾ ನಿಕಾಯಗಳ ಡೀನರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
3. ಸಿಸ್ಟಂ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು – ಜಾಲತಾಣದಲ್ಲಿ ಪ್ರಕಟಿಸುವುದು ಮತ್ತು ಅಧ್ಯಯನ ಮಂಡಳಿಯ ಅಧ್ಯಕ್ಷರುಗಳಿಗೆ ಇ-ಮೇಲ್ ಕಳುಹಿಸುವುದು.

ಪ್ರತಿಗಳು:
1. ಕುಲಸಚಿವರು (ಮೌಲ್ಯಮಾಪನ) ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಮಾನ್ಯ ಕುಲಪತಿಯವರ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
3. ಮಾನ್ಯ ಕುಲಸಚಿವರ ಆಪ್ತ ಸಹಾಯಕರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
4. ಕಛೇರಿ ಪ್ರತಿ.